# ದೊಡ್ಡ ಕನಸುಗಳಿಗೆ ಸಮಯ ಬೇಕು

‘ರಕ್ಷಿತ್ ಶೆಟ್ಟಿ ಸಿನಿಮಾಗಳೇಕೆ ಟೈಮ್ ತೆಗೆದುಕೊಳ್ಳುತ್ತವೆ?’

‘ರಿಚರ್ಡ್ ಆಂಟನಿ’ ಸಿನಿಮಾಗೆ ಸಂಬಂಧಿಸಿದಂತೆ ಇಂಥದ್ದೊಂದು ಪ್ರಶ್ನೆ ರಕ್ಷಿತ್ ಶೆಟ್ಟಿಗೆ ಅಭಿಮಾನಿಗಳಿಂದ ಈಚೆಗೆ ಎದುರಾಗಿತ್ತಂತೆ. ಈ ಪ್ರಶ್ನೆಗೆ ಅವರು ಸಂದರ್ಶನವೊಂದರಲ್ಲಿ ಉತ್ತರವನ್ನೂ ನೀಡಿದ್ದಾರೆ.

ಸದ್ಯ ನಾಲ್ಕು ಸ್ಕ್ರಿಪ್ಟ್‌ಗಳಲ್ಲಿ ಬ್ಯುಸಿಯಾಗಿದ್ದಾರೆ ರಕ್ಷಿತ್. ತಮ್ಮ ಊರು ಉಡುಪಿ ಹಾಗೂ ಬೆಂಗಳೂರಿನ ನಡುವೆ ಓಡಾಡುತ್ತಾ ಪ್ರೊಡಕ್ಷನ್ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಈ ನಡುವೆ ‘ಉಳಿದವರು ಕಂಡಂತೆ’ ಸೀಕ್ವೆಲ್ ಆಗಿರುವ ‘ರಿಚರ್ಡ್ ಆಂಟನಿ’ ಸಿನಿಮಾ ಪ್ರಿ ಪ್ರೊಡಕ್ಷನ್ ಹಂತದಲ್ಲಿದೆ. ಈ ಸಿನಿಮಾ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದ್ದು, ಅದಕ್ಕೆ ವಿವರಣೆಯನ್ನೂ ನೀಡಿದ್ದಾರೆ.

“ಮೊದಲು ಸ್ಕ್ರಿಪ್ಟ್ ನನಗೆ ತೃಪ್ತಿದಾಯಕವಾಗಿರಬೇಕು. ನನಗೆ ಅವಸರ ಇಲ್ಲ. ‘ರಿಚರ್ಡ್ ಆಂಟನಿ’ ಸ್ಕ್ರಿಪ್ಟ್ ಅಂತಿಮ ಹಂತದಲ್ಲಿದೆ. ದುಬೈನಲ್ಲಿ ಲೊಕೇಷನ್‌ಗಳನ್ನೂ ಸೆಟ್ ಮಾಡಿದ್ದೇನೆ. ಅಮೆರಿಕಕ್ಕೂ ಕೆಲಸದ ನಿಮಿತ್ತ ಹೋಗುತ್ತಿದ್ದೇನೆ. ಈ ಪ್ಲಾನಿಂಗ್ ಕೆಲಸವೇ ನನ್ನ ಪ್ರಾಜೆಕ್ಟ್ ಅನ್ನು ಅನನ್ಯವಾಗಿಸುವುದು. ದೊಡ್ಡ ಕನಸುಗಳು ಹೆಚ್ಚಿಗೆ ಸಮಯ ತೆಗೆದುಕೊಳ್ಳುತ್ತವೆ” ಎಂದಿದ್ದಾರೆ.

“ನಾನು ಕೆಲಸ ಮಾಡುವ ಪ್ರತಿ ಪ್ರಾಜೆಕ್ಟ್ ಕೂಡ ಸಮಯ ಹಿಡಿಯುತ್ತದೆ. ‘ರಿಚರ್ಡ್ ಆಂಟನಿ’ ಜೊತೆ ‘ಮಿಡ್ ವೇ ಟು ಮೋಕ್ಷ’, ‘ಪುಣ್ಯಕೋಟಿ 1’, ‘ಪುಣ್ಯಕೋಟಿ 2’ ಸಿನಿಮಾ ಕೆಲಸವೂ ನಡೆಯುತ್ತಿದೆ” ಎಂದು ಮಾಹಿತಿ ನೀಡಿದ್ದಾರೆ.

ನಿರ್ದೇಶನಕ್ಕೆ ತಮ್ಮ ಹೃದಯದಲ್ಲಿ ವಿಶೇಷ ಸ್ಥಾನ ಇದೆ ಎನ್ನುವ ರಕ್ಷಿತ್, ‘ನಟನೆಗೂ ಮೀರಿ ನಿರ್ದೇಶನದತ್ತ ಪ್ರೀತಿ ಬೆಳೆದಿದೆ. ನಿರ್ದೇಶನ ನನಗೆ ತೃಪ್ತಿ ನೀಡುವ ಕೆಲಸ. ಒಂದು ಸಿನಿಮಾಗೆ ಆಕಾರ ನೀಡುವುದು ಖುಷಿ ನೀಡುತ್ತದೆ. ಪ್ರತಿ ಸೀನ್‌ಗಳನ್ನು ಜೋಡಿಸುವುದು, ನನ್ನ ದೃಷ್ಟಿಕೋನಕ್ಕೆ ಜೀವ ನೀಡುವುದು ಎಲ್ಲವೂ ಖುಷಿ ನೀಡುತ್ತದೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ತಮ್ಮದೇ ನಿರ್ದೇಶನದ ಸಿನಿಮಾದಲ್ಲಿ ತಾವೇ ನಟಿಸುವುದು ಕೂಡ ತಮ್ಮ ಆದ್ಯತೆಯಾಗಿರುವುದಾಗಿ ತಿಳಿಸಿದ್ದಾರೆ.

‘ನಿರ್ದೇಶನ–ನಟನೆ ಎರಡರಲ್ಲೂ ಇರುವುದು ಒಂದು ರೀತಿ ಕಂಫರ್ಟ್ ಹಾಗೂ ಕ್ರಿಯಾಶೀಲ ಆಗಿರುತ್ತದೆ. ಹೀಗಿದ್ದಾಗ ನರೇಟಿವ್ ಹಾಗೂ ಪಾತ್ರಗಳ ಮೇಲೆ ಸಂಪೂರ್ಣ ನಿಯಂತ್ರಣವಿರುತ್ತದೆ. ನನ್ನ ಕ್ರಿಯಾಶೀಲ ಆಲೋಚನೆಗಳನ್ನು ವ್ಯಕ್ತಪಡಿಸಲು ಅವಕಾಶವಿರುತ್ತದೆ’ ಎಂದಿದ್ದಾರೆ.



# ಅಮೃತಾ ಸೆಕೆಂಡ್ ಚಾನ್ಸ್



‘ಟಗರು ಪಲ್ಯ’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿದ್ದ ನಟಿ ಅಮೃತಾ ಪ್ರೇಮ್, ಇದೀಗ ಎರಡನೇ ಸಿನಿಮಾಗೆ ಸಜ್ಜಾಗಿದ್ದಾರೆ.

ತ್ರಿಕೋನ ಪ್ರೀತಿ ಎಳೆಯಿರುವ ಸಿನಿಮಾದಲ್ಲಿ ನಟಿಸುತ್ತಿದ್ದು, ತಮ್ಮ ಸಿನಿ ಕರಿಯರ್‌ಗೆ ಈ ಸಿನಿಮಾ ಮಹತ್ತರ ಹೆಜ್ಜೆಯಾಗಿರುವುದಾಗಿ ಹೇಳಿದ್ದಾರೆ. ತಮ್ಮ ಮೊದಲನೇ ಸಿನಿಮಾದಿಂದ ಕಲಿತ ಪಾಠಗಳನ್ನು ಈ ಸಿನಿಮಾಗೆ ಅನ್ವಯಿಸುವುದಾಗಿಯೂ ಹೇಳಿದ್ದಾರೆ.

‘ನಾನು ಜನರಿಂದ ಇಷ್ಟು ಪ್ರೀತಿ ಹಾಗೂ ಪ್ರತಿಕ್ರಿಯೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಈಗ ಒಳ್ಳೆಯ ಕಥೆಯೊಂದಿಗೆ ಬರುತ್ತೇನೆ ಎಂದು ಜನರು ನನ್ನ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಆ ಜವಾಬ್ದಾರಿಯನ್ನು ನಾನು ಉಳಿಸಿಕೊಳ್ಳಬೇಕಿದೆ. ಜನರ ನಿರೀಕ್ಷೆಯನ್ನು ಹುಸಿ ಮಾಡಬಾರದು ಎಂದು ಮೊದಲ ಸಿನಿಮಾ ನಂತರ ಬೇರೆ ಸಿನಿಮಾಗೆ ಸಹಿ ಮಾಡಲು ಸ್ವಲ್ಪ ಸಮಯ ತೆಗೆದುಕೊಂಡೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ತಮ್ಮ ಎರಡನೇ ಸಿನಿಮಾ ಕುರಿತು ಮಾಹಿತಿ ಹಂಚಿಕೊಂಡಿರುವ ಅವರು, ‘ಇದು ಹೊಸ ಜನರೇಷನ್‌ನ ಕಾಲೇಜು ಪ್ರೀತಿಯ ಕಥೆ. ಈ ಪಾತ್ರ ನನ್ನನ್ನು ಜನರಿಗೆ ಹತ್ತಿರ ಮಾಡುತ್ತದೆ. ನನ್ನ ಪಾತ್ರ ಎನ್ನುವುದಕ್ಕಿಂತ, ನನಗೆ ಇಷ್ಟವಾಗಿರುವುದು ಸ್ಕ್ರಿಪ್ಟ್’ ಎಂದು ಹೇಳಿದ್ದಾರೆ.

‘ಹೊಸ ನಟರಿಗೆ ಎರಡನೇ ಸಿನಿಮಾ ತುಂಬಾ ಮುಖ್ಯವಾಗಿರುತ್ತದೆ. ಮೊದಲ ಸಿನಿಮಾದಲ್ಲಿ ಹೊಸ ನಟರಲ್ಲಿ ಭಯ ತುಂಬಿರುತ್ತದೆ. ಆತ್ಮವಿಶ್ವಾಸ ಇರುವುದಿಲ್ಲ. ಪರ್ಫಾರ್ಮೆನ್ಸ್ ಕೂಡ ಹಲವು ಟ್ರಯಲ್ ಅಂಡ್ ಎರರ್‌ಗಳನ್ನು ನೋಡಿರುತ್ತದೆ. ಮೊದಲ ಸಿನಿಮಾದಿಂದ ಏನು ಕಲಿತಿದ್ದೆವೋ ಎರಡನೇ ಸಿನಿಮಾದಲ್ಲಿ ಅದನ್ನು ಅಳವಡಿಸಿಕೊಳ್ಳುತ್ತೇವೆ. ಎರಡನೇ ಸಿನಿಮಾ ಅವರಿಗೆ ಎರಡನೇ ಚಾನ್ಸ್ ಇದ್ದಂತೆ’ ಎಂದಿದ್ದಾರೆ.

ಈ ನಡುವೆ ಸಿನಿಮಾರಂಗದ ಹಲವು ಜನರನ್ನು, ಪ್ರೇಕ್ಷಕರನ್ನು, ಸೆಲೆಬ್ರಿಟಿಗಳನ್ನು, ಸೂಪರ್‌ಸ್ಟಾರ್‌ಗಳನ್ನು ಭೇಟಿಯಾಗಿದ್ದು, ಇವೆಲ್ಲವೂ ತಮಗೆ ಉತ್ತಮ ಅನುಭವಗಳಾಗಿರುವುದಾಗಿ ತಿಳಿಸಿದ್ದಾರೆ. ಬೇರೆ ಕಲಾವಿದರ ಸಲಹೆಗಳು ತಮ್ಮನ್ನು ತಿದ್ದಿಕೊಳ್ಳಲು ಸಹಾಯ ಮಾಡಿವೆ ಎಂದೂ ಹೇಳಿದ್ದಾರೆ. ಈ ಸಿನಿಮಾದಲ್ಲಿ ಅಮೃತಾ ಪ್ರೇಮ್ ಜೊತೆ ರಕ್ಷಿತ್ ನಾಗರಾಜ್ ಹಾಗೂ ಜೆರುಷಾ ಕ್ರಿಸ್ಟೊಫರ್ ತೆರೆ ಹಂಚಿಕೊಳ್ಳುತ್ತಿದ್ದಾರೆ.